ಇ) ದಿನಾಂಕ 9.8.1996ರ ಆದೇಶದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಲಿಯು ರಾಜ್ಯ ಸರ್ಕಾರಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ಕ್ರಮ ಬದ್ಧಗೊಳಿಸಲು ಆದೇಶ ನೀಡಿರುತ್ತದೆ. ಭಾರತ ಸರ್ಕಾರದ ಸೂಚನೆಯಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿಯನ್ನು ದಾಖಲು ಮಾಡಲಾಗಿದೆ. ಸರ್ವೋಚ್ಚನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗಿದೆ. ನ್ಯಾಯಾಲಯದ ತೀರ್ಪು ಬಂದ ನಂತರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೊಸಪೇಟೆ ತಾಲ್ಲೂಕಿನ ಕೊಳಚೆ ಪ್ರದೇಶಗಳು

1712 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸಪೇಟೆ ತಾಲ್ಲೂಕಿನಲ್ಲಿ ಘೋಷಿತ ಕೊಳಚೆ ಪ್ರದೇಶಗಳೆಷ್ಟು? ಯಾವುವು?*

ಆ) *ಪ್ರತಿ ಕೊಳಚೆ ಪ್ರದೇಶಗಳಿಗೆ ನಿರ್ದಿಷ್ಟವಾಗಿ ನಿಗಧಿಪಡಿಸಿದ ಹಣವೆಷ್ಟು? ಯಾವ ಅಭಿವೃದ್ಧಿ ಕೆಲಸಗಳಿಗಾಗಿ?*

ಇ) *ಹೊಸದಾಗಿ ಘೋಷಿಸಲು ಉದ್ದೇಶಿಸಿರುವ ಕೊಳಚೆ ಪ್ರದೇಶಗಳೆಷ್ಟು? ಯಾವುವು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಹೊಸಪೇಟೆ ತಾಲ್ಲೂಕಿನಲ್ಲಿ ಘೋಷಿತ ಒಟ್ಟು 38 ಕೊಳಚೆ ಪ್ರದೇಶಗಳದ್ದು ವಿವರ ಕೆಳಗಿನಂತಿದೆ.

ಕಮಲಾಪುರ ಪಟ್ಟಣ	-	8
ಅಮರಾವತಿ ಪಟ್ಟಣ	-	2
ಕಂಪ್ಲಿ ಪಟ್ಟಣ	-	3
ಹೊಸಪೇಟೆ ನಗರ	-	25

(ವಿವರಗಳನ್ನು ಅನುಬಂಧ - 1ರಲ್ಲಿ ಒದಗಿಸಿದೆ)

ಆ) ರಾಜ್ಯ ಸರ್ಕಾರವು ಪ್ರತಿ ಸಾಲಿನ ಆಯವ್ಯಯದಲ್ಲಿ ಮಂಡಳಿಗೆ ನಿಗಧಿಪಡಿಸಲಿರುವ ಅನುದಾನ ಆಧರಿಸಿ ಕೊಳಚೆ ಪ್ರದೇಶಗಳ ಸಂಖ್ಯೆ, ಜನಸಂಖ್ಯೆ ಹಾಗೂ ಹಣದ ಲಭ್ಯತೆ ಆಧಾರದ ಮೇಲೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಹಂತ ಹಂತವಾಗಿ ಕೊಳಚೆಗೇರಿಗಳ ಅಭಿವೃದ್ಧಿಗಾಗಿ ಹಣವನ್ನು ನಿಗಧಿಪಡಿಸಲಾಗುವುದು.

ಇ) ಹೊಸಪೇಟೆ ನಗರದಲ್ಲಿ 9 ಮತ್ತು ಕಮಲಾಪುರ ಪಟ್ಟಣದಲ್ಲಿ 9 ಕೊಳಚೆ ಪ್ರದೇಶಗಳನ್ನು ಹೊಸದಾಗಿ ಗುರುತಿಸಿದ್ದು, ಈ 18 ಕೊಳಚೆ ಪ್ರದೇಶಗಳನ್ನು ಕಾಯಿದೆ ಅಡಿಯಲ್ಲಿ ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

(ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ).

ಅನುಬಂಧ - 1

ಹೊಸಪೇಟೆ ನಗರ

1. ಸ್ಲಾಟರ್ ಹೌಸ್ ಕೊಳಚೆ ಪ್ರದೇಶ
2. ಪ್ರೇಮ್‌ನಗರ ಕೊಳಚೆ ಪ್ರದೇಶ
3. ಜಬ್ಬಲ್ ಕೊಳಚೆ ಪ್ರದೇಶ (ಇಂದಿರಾನಗರ)
4. ಕೊಟ್ಟೂರು ಸ್ವಾಮಿ ಮಠ ಏರಿಯಾ
5. ಕೊಟ್ಟಯ್ಯನ ಗೋಪಾಲ ಮತ್ತು ಇತರರು
6. ಹಂಪಿ ರಸ್ತೆ ಏರಿಯಾ
7. ಸುಣ್ಣದ ಭಟ್ಟಿ ಏರಿಯಾ
8. ಅಂಬೇಡ್ಕರ್ ನಗರ ಕೊಳಚೆ ಪ್ರದೇಶ
9. ತಳವಾರ್ ಕೇರಿ ಕೊಳಚೆ ಪ್ರದೇಶ
10. ಸಂತೆ ಬೈಲು ಕೊಳಚೆ ಪ್ರದೇಶ
11. ರಾಮಚಿತ್ರ ಮಂದಿರದ ಹತ್ತಿರ
12. ಮೆಹಬೂಬ್ ನಗರ ಕೊಳಚೆ ಪ್ರದೇಶ
13. ಶ್ರೀರಾಮಲು ಪಾರ್ಕ್ ಏರಿಯಾ
14. ಖಾಜನಗರ
15. ದಾಸರ ಓಣಿ
16. ಸಿದ್ದಲಿಂಗಪ್ಪ ಚೌಕಿ
17. ಗುತ್ತಿ ತೋಟಪ್ಪ ಏರಿಯಾ
18. ಒಳಕೇರಿ ಹರಿಜನಕೇರಿ
19. ಮುದ್ದಾಪುರ ರಸ್ತೆ ಕೊಳಚೆ ಪ್ರದೇಶ
20. ಕುಂಬಾರಕೇರಿ ಕೊಳಚೆ ಪ್ರದೇಶ
21. ಥಿಯೋಸೋಫಿಕಲ್ ಲಾಡ್ಜ್ ಉತ್ತರ ಭಾಗ
22. ಪಿಂಜೂರು ಓಣಿ ಒಂದನೇ ವಾರ್ಡ್
23. ಥಿಯೋಸೋಫಿಕಲ್ ಲಾಡ್ಜ್
24. ಜಗ್ಗಲ ರಾಯನ ಕಟ್ಟಿ
25. ಮೂರು ಗೋರಿ ಏರಿಯಾ

ಕಮಲಾಪುರ ಪಟ್ಟಣ

1. ಹರಿಜನವಾಡ ಕೊಳಚೆ ಪ್ರದೇಶ
2. ಚರ್ಚ್ ಹಿಂಭಾಗದ ಕೊಳಚೆ ಪ್ರದೇಶ
3. ಚಪ್ಪರದ ಹಳ್ಳಿ ಕೊಳಚೆ ಪ್ರದೇಶ
4. ಮೀನುಗಾರರ ಓಣಿ ಕೊಳಚೆ ಪ್ರದೇಶ
5. ಚೌಡಗೇರಿ ಕೊಳಚೆ ಪ್ರದೇಶ
6. ಗಾರ್‌ಭಾವಿ ಕುಂಟೆ ಕೊಳಚೆ ಪ್ರದೇಶ
7. ಕೆರೆ ತಾಂಡ ಕೊಳಚೆ ಪ್ರದೇಶ
8. ಕುಪ್ಪಯ್ಯನಪಾಳ್ಯ ಕ್ಯಾಂಪ್ ಕೊಳಚೆ ಪ್ರದೇಶ

ಅಮರಾವತಿ ಪಟ್ಟಣ

1. ನಿಶಾನಿ ಕ್ಯಾಂಪ್ ಕೊಳಚೆ ಪ್ರದೇಶ
2. ಡ್ರೆಸೆಸ್ ಕ್ಯಾಂಪ್ ಕೊಳಚೆ ಪ್ರದೇಶ

ಕಂಪ್ಲಿ ಪಟ್ಟಣ

1. ಚಪ್ಪರದ ಹಳ್ಳಿ ಕೊಳಚೆ ಪ್ರದೇಶ
2. ಶಿಖಾರಿ ಕಾಲೋನಿ ಕೊಳಚೆ ಪ್ರದೇಶ
3. ಬೆಳಗೋಡು ಕೊಳಚೆ ಪ್ರದೇಶ

ಅನುಬಂಧ - 2

ಹೊಸಪೇಟೆ ಪಟ್ಟಣದಲ್ಲಿ 9 ಕೊಳಚೆ ಪ್ರದೇಶಗಳು

1. ವೀರಾಸ್ವಾಮಿ ಕಾಂಪೌಂಡ್ ಕೊಳಚೆ ಪ್ರದೇಶ
2. ಡಾ: ಹಜೇಬುಲ್ಲ ಕ್ಲಿನಿಕ್ ಹಿಂಭಾಗದ ಕೊಳಚೆ ಪ್ರದೇಶ
3. ಚಿತ್ತವಾಡ್ಗಿ ಕೊರವರ ಓಣಿ ಕೊಳಚೆ ಪ್ರದೇಶ
4. ಪಾರ್ವತಿನಗರ ಕೊಳಚೆ ಪ್ರದೇಶ
5. ರೈಲ್ವೆ ಸ್ಟೇಷನ್ ಹಿಂಭಾಗದ ಕೊಳಚೆ ಪ್ರದೇಶ
6. ರಾಜಾಧಿನಗರ ಕೊಳಚೆ ಪ್ರದೇಶ
7. ಸಿರಸಿನ ಕಲ್ಲಿ ಕೊಳಚೆ ಪ್ರದೇಶ
8. ಸಾಯಿಬಾಬಾ ಗುಡಿ ಹಿಂಭಾಗದ ಕೊಳಚೆ ಪ್ರದೇಶ
9. ಉಮಾಪತಿಯವರ ಮನೆ ಹಿಂಭಾಗದ ಕೊಳಚೆ ಪ್ರದೇಶ

ಕಮಲಾಪುರ ಪಟ್ಟಣದಲ್ಲಿ 9 ಹೊಸ ಕೊಳಚೆ ಪ್ರದೇಶಗಳು

1. ಮುಲ್ಲಾರ ಓಣಿ ಕೊಳಚೆ ಪ್ರದೇಶ
2. ಕಮ್ಮಾರ ಓಣಿ ಕೊಳಚೆ ಪ್ರದೇಶ
3. ಕುಂಟೆ ಪ್ರದೇಶ (11ನೇ ವಾರ್ಡ್)
4. ಚಪ್ಪರದಹಳ್ಳಿ (ಬಸ್‌ಸ್ಟ್ಯಾಂಡ್ ಏರಿಯಾ)
5. ಮನ್ಮಥಗೇರಿ ಕೊಳಚೆ ಪ್ರದೇಶ
6. ಕೋಟೆ ಏರಿಯಾ ಕೊಳಚೆ ಪ್ರದೇಶ
7. ಬಂಡಗೇರಿ ಕೊಳಚೆ ಪ್ರದೇಶ
8. ಕುಂಟೆ ಏರಿಯಾ ಕೊಳಚೆ ಪ್ರದೇಶ
9. ಕಿರೀಟ ಎಲ್ಲಮ್ಮನಗುಡಿ ಕೊಳಚೆ ಪ್ರದೇಶ